# ಕರ್ನಾಟಕ ವಿಧಾನ ಪರಿಷತ್ತು

01. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 384

02. ಮಾನ್ಯ ವಿಧಾನ ಪರಿಷತ್ತು ಸದಸ್ಯರ ಹೆಸರು : ಶ್ರೀ ಎನ್.ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)

03. ಉತ್ತರಿಸುವ ದಿನಾಂಕ : 07-12-2023

04. ಉತ್ತರಿಸುವ ಸಚಿವರು. : ಗೃಹ ಸಚಿವರು.

| ಕ್ರ.ಸ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಕಳೆದ 2 ವರ್ಷಗಳಿಂದ ವಿವಿಧ ರಾಜಕೀಯ ಪಕ್ಷಗಳ ಹಾಗೂ ಸಂಘ ಸಂಸ್ಥೆಗಳ ಕಾರ್ಯಕರ್ತರ ಹತ್ಯೆಗೀಡಾದವರ ಸಂಖ್ಯೆ ಎಷ್ಟು; ಹತ್ಯೆಗೀಡಾದವರ ಕುಟುಂಬಕ್ಕೆ ನೀಡಲಾದ ಪರಿಹಾರ ಎಷ್ಟು; ಪರಿಹಾರ ನೀಡಲು ಇರುವ ಸರ್ಕಾರದ ಮಾನದಂಡಗಳೇನು? (ಮಾಹಿತಿ ನೀಡುವುದು) | ವಿವಿಧ ರಾಜಕೀಯ ಪಕ್ಷಗಳ ಹಾಗೂ ಸಂಘ ಸಂಸ್ಥೆಗಳ ಕಾರ್ಯಕರ್ತರ ಹತ್ಯೆಗೀಡಾದವರ ಸಂಖ್ಯೆ, ಹತ್ಯಗೀಡಾದವರ ಕುಟುಂಬಕ್ಕೆ ನೀಡಲಾದ ಪರಿಹಾರದ ವರ್ಷವಾರು ವಿವರಗಳನ್ನು **ಅನುಬಂಧದಲ್ಲಿ** ನೀಡಲಾಗಿದೆ. |
| ಆ | ಹತ್ಯೆಗೈದವರ ಆರೋಪಿಗಳನ್ನು ಬಂಧಿಸಲಾಗಿದೆಯೇ; ತನಿಖೆಯು ಯಾವ ಹಂತದಲ್ಲಿದೆ; ತನಿಖೆ ಪೂರ್ಣಗೊಂಡಿದ್ದಲ್ಲಿ ಕೊಲೆಗೆ ನಿಖರವಾದ ಕಾರಣಗಳೇನು; (ವಿವರ ನೀಡುವುದು) | ಹತ್ಯೆಗೈದವರ ಆರೋಪಿಗಳನ್ನು ಬಂಧಿಸಲಾದ ವಿವರ ಮತ್ತು ಪ್ರಕರಣಗಳ ಪ್ರಸ್ತುತ ಹಂತ ಹಾಗೂ ಕೊಲೆಗೆ ಕಾರಣಗಳ ಸಂಪೂರ್ಣ ವಿವರಗಳನ್ನು **ಅನುಬಂಧದಲ್ಲಿ** ನೀಡಲಾಗಿದೆ. |
| ಇ | ಈ ಹತ್ಯೆಗಳನ್ನು ಗಮನಿಸಿದಲ್ಲಿ ದ್ವೇಷ, ರಾಜಕೀಯ ಪ್ರೇರಿತ ಹತ್ಯೆಯೆಂದು ಪರಿಗಣಿಸಬಹುದೆ; ಈ ರೀತಿಯ ಹತ್ಯೆಗಳನ್ನು ತಡೆಗಟ್ಟಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು; | ➢ ರಾಜ್ಯದಲ್ಲಿ ಶಾಂತಿ ಸಾಮರಸ್ಯವನ್ನು ಕದಡುವಂತಹ ವ್ಯಕ್ತಿಗಳ ಚಟುವಟಿಕೆಗಳ ಮೇಲೆ ನಿಗಾ ವಹಿಸಲಾಗುತ್ತಿದೆ.<br>➢ ಸಮಾಜ ವಿರೋಧಿ ಚಟುವಟಿಕೆ ನಡೆಸುವವರ ಮೇಲೆ ವಿಶೇಷವಾಗಿ ಸೂಕ್ತ ನಿಗಾ ಇಡಲಾಗಿದೆ.<br>➢ ಸಾಮಾಜಿಕ ಜಾಲ ತಾಣಗಳಲ್ಲಿ ದ್ವೇಷಪೂರಿತ ಸುಳ್ಳು ಸುದ್ದಿಗಳನ್ನು ಹರಡುವ ವ್ಯಕ್ತಿಗಳನ್ನು ಗುರುತಿಸಿ ಅಂಥಹವರ ಮೇಲೆ ಕ್ರಮ ವಹಿಸಲಾಗುತ್ತಿದೆ.<br>➢ ಸಮಾಜಘಾತುಕ ಚಟುವಟಿಕೆಗಳಲ್ಲಿ ತೊಡಗುವವರ ಮೇಲೆ ಮುಂಜಾಗ್ರತಾ ಕ್ರಮವಾಗಿ ಭದ್ರತಾ ಕಾಯ್ದೆ/ ಗೂಂಡಾ ಕಾಯ್ದೆಯ ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ. |

| | | |
|---|---|---|
| ಈ | ಇಂತಹ ಘಟನೆಗಳಿಂದ ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಬಂದಿದ್ದಲ್ಲಿ, ಕೈಗೊಂಡ ಕ್ರಮಗಳೇನು? | ➢ ರಾಜ್ಯದಲ್ಲಿ ಮುಂಜಾಗ್ರತಾ ಕ್ರಮವಾಗಿ ಎಲ್ಲಾ ಸಂಘ, ಸಂಘಟನೆ, ರಾಜಕೀಯ ಪಕ್ಷಗಳ ಕಾರ್ಯಕರ್ತರ ಚಟುವಟಿಕೆಗಳ ಮೇಲೆ ಸೂಕ್ತ ನಿಗಾ ಇಡಲು ಅಧೀನ ಪೊಲೀಸ್ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನಗಳನ್ನು ನೀಡಲಾಗಿರುತ್ತದೆ.<br>➢ ಸಾಮಾಜಿಕ ಜಾಲ ತಾಣಗಳಲ್ಲಿ ದ್ವೇಷಪೂರಿತ ಸುಳ್ಳು ಸುದ್ದಿಗಳನ್ನು ಹರಡುವ ವ್ಯಕ್ತಿಗಳನ್ನು ಗುರುತಿಸಿ ಅಂಥವರ ಮೇಲೆ ನಿಗಾ ಇಡಲಾಗುತ್ತಿದೆ.<br>➢ ಜಿಲ್ಲೆಗಳಲ್ಲಿನ ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿ ಗ್ರಾಮಗಸ್ತು, ಗ್ರಾಮಸಭೆ, ಯುವಜನ ಸಭೆ, ಶಾಂತಿ ಸಭೆ, ಜನಸಂಪರ್ಕ ಸಭೆಗಳನ್ನು ಹಮ್ಮಿಕೊಂಡು ಸಾರ್ವಜನಿಕರಿಗೆ ಕಾನೂನು ಉಲ್ಲಂಘಿಸದಂತೆ ಸೂಕ್ತ ತಿಳುವಳಿಕೆ ನೀಡಲಾಗುತ್ತಿದೆ.<br>➢ ಜಿಲ್ಲೆಗಳಿಗೆ ಹೊಂದಿಕೊಂಡಂತೆ ಹೊರರಾಜ್ಯ, ಹೊರಜಿಲ್ಲೆಗಳಿಂದ ಪ್ರವೇಶಿಸುವ ಮಾರ್ಗದಲ್ಲಿ ಚೆಕ್‌ಪೋಸ್ಟ್‌ಗಳನ್ನು ಸ್ಥಾಪಿಸಿ ಸೂಕ್ತ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗುತ್ತಿದೆ. |

**HD/32/PCQ/2023**

(ಡಾ. ಜಿ. ಪರಮೇಶ್ವರ)
ಗೃಹ ಸಚಿವರು.

ಅನುಬಂಧ

## 2022ನೇ ಸಾಲಿನಲ್ಲಿ ವಿವಿಧ ರಾಜಕೀಯ ಪಕ್ಷಗಳ ಹಾಗೂ ಸಂಘ ಸಂಸ್ಥೆಗಳ ಕಾರ್ಯಕರ್ತರ ಹತ್ಯೆಯಾದವರ ಸಂಪೂರ್ಣ ವಿವರ

ಹುಬ್ಬಳ್ಳಿ-ಧಾರವಾಡ ನಗರ

| ಕ್ರ ಸಂ | ನಗರ/ ಜಿಲ್ಲೆ | ಪೊಲೀಸ ಠಾಣೆಯ ಹೆಸರು | ಪ್ರಕರಣದ ಸಂಖ್ಯೆ ಹಾಗೂ ಕಲಂ | ಪ್ರಕರಣದ ಸಂಕ್ಷಿಪ್ತ ವಿವರ | ರಾಜಕೀಯ ಪಕ್ಷ/ ಸಂಘ ಸಂಸ್ಥೆಗಳ ಕಾರ್ಯಕರ್ತರ ಹತ್ಯೆಗೀಡಾದವರ ವಿವರ | | | ಪರಿಹಾರ ನೀಡಲು ಇರುವ ಸರಕಾರದ ಮಾನದಂಡಗಳು | ಆರೋಪಿಗಳನ್ನು ಬಂಧಿಸ ಲಾಗಿದೆಯೆ | ತನಿಖೆಯ ಹಂತ | ತನಿ... ಪೂರ್ಣಗೊ... ಕೊಲೆಗೆ ಕಾರ... |
|---|---|---|---|---|---|---|---|---|---|---|---|
| | | | | | ಪಕ್ಷ / ಸಂಘದ ಹೆಸರು | ಹತ್ಯೆಯಾದವರ ಸಂಖ್ಯೆ | ಕುಟುಂಬಕ್ಕೆ ನೀಡಲಾದ ಸರಕಾರ ಪರಿಹಾರ | | | | |
| 1. | ಹು-ಧಾ ಪೊಲೀಸ್ ಕಮೀಷನರೇಟ್ | ಹಳೇಹುಬ್ಬಳ್ಳಿ ಪೊಲೀಸ ಠಾಣೆ | ಗುನ್ನಾ ನಂ : 110/2022, ಕಲಂ : 143, 147, 148, 302, ಸಹ ಕಲಂ 149 ಐಪಿಸಿ | ಇದರಲ್ಲಿ ಫಿರ್ಯಾದಿಯ ಅಣ್ಣನಾದ ಮೃತ ದೀಪಕ ಪಟದಾರಿ. ಈತನು ಕಳೆದ 8 ವರ್ಷದ ಹಿಂದೆ ಫಿರ್ಯಾದಿಯ ಅಣ್ಣನಾದ ದೀಪಕ ಈತನು. ಮೋಟ ಇವರ ಕುಟುಂಬದ ಹುಡಗಿಯನ್ನು ಪ್ರೀತಿಸಿ ಮದುವೆಯಾಗಿದ್ದು ಇತ್ತು. ಹಾಗೂ ಸುಮಾರು 15 ದಿನಗಳ ಹಿಂದೆ | ರಾಯನಾಳ ಗ್ರಾಮದ, ಗ್ರಾಮ ಪಂಚಾಯತಿ ಸದಸ್ಯ | 01 | -- | -- | ಬಂಧಿಸಲಾಗಿದೆ | ಈ ಪ್ರಕರಣದ ಮುಂದಿನ ತನಿಖೆಯನ್ನು, ಸಿಐಡಿ ಬೆಂಗಳೂರು ವಿಭಾಗಕ್ಕೆ ವರ್ಗಾಯಿಸಲಾಗಿದೆ. | -- |

ರಾಯನಾಳ ಗ್ರಾಮದ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಮೇಲೆ ಅವಿಶ್ವಾಸ ನಿರ್ಣಯ ಮಂಡಿಸಿದ್ದು ಇರುತ್ತದೆ. ಈ ಎಲ್ಲಾ ಸಿಟ್ಟಿನಿಂದ ದಿನಾಂಕ : 04.07.2022 ರಂದು ರಾತ್ರಿ 10.30 ಗಂಟೆಯ ಸುಮಾರಿಗೆ ಬಸವರಾಜ ಮಾರಡಗಿ, ಈತನಿಗೆ ರಾಯನಾಳಕ್ಕೆ ಮೋಟಾರ ಸೈಕಲ್ ಮೇಲೆ ಫಿರ್ಯಾದಿಯು ಅಗ್ಗಿಸು ಬಿಡಲು ಹೋಗುವಾಗ, ಹುಬ್ಬಳ್ಳಿ ರಾಯನಾಳ ಗ್ರಾಮದ, ರುದ್ರಪ್ಪಾ ಬಸಪ್ಪಾ ಮೇಟಿ, ಇವರ ಮನೆಯ ಮುಂದೆ ಇರುವ

ದಕ್ಷಿಣ ಕನ್ನಡ

| ಕ್ರ. ಸಂ | ಜಿಲ್ಲೆ | ಪೊಲೀಸ್ ಠಾಣೆ | ಪ್ರಕರಣದ ಸಂಖ್ಯೆ ಹಾಗೂ ಕಲಂ | ಪ್ರಕರಣದ ಸಂಕ್ಷಿಪ್ತ ವಿವರ | ರಾಜಕೀಯ ಪಕ್ಷ/ ಸಂಘ ಸಂಸ್ಥೆಗಳ ಕಾರ್ಯಕರ್ತರ ಹತ್ಯೆಗೀಡಾದವರ ವಿವರ | | | ಪರಿಹಾರ ನೀಡಲು ಇರುವ ಸರ್ಕಾರದ ಮಾನದಂಡಗಳು | ಆರೋಪಿಗಳನ್ನು ಬಂಧಿಸಲಾಗಿದೆಯೇ | ತನಿಖೆಯ ಹಂತ | ತನಿ… ಪೂರ್ಣ… ಡಿದ್ದ… ಸಿವಿಲ… ಕಾ… |
|---|---|---|---|---|---|---|---|---|---|---|---|
| | | | | | ಪಕ್ಷ/ ಸಂಘದ ಹೆಸರು | ಹತ್ಯೆಯಾದವರ ಸಂಖ್ಯೆ | ಕುಟುಂಬಕ್ಕೆ ನೀಡಲಾದ ಸರ್ಕಾರದ ಪರಿಹಾರ | | | | |
| 1 | ದ.ಕ. | ಬೆಳ್ಳಾರೆ | ಅ.ಕ್ರ:63/2022 ಕಲಂ:120 (ಬಿ), 302 ಐಪಿಸಿ ಮತ್ತು ಕಲಂ:16, 18 ಯುಎಪಿ ಆಕ್ಟ್ | ಪ್ರಕರಣದ ಫಿರ್ಯಾದಿದಾರರು ಸುಳ್ಯ ತಾಲೂಕು ಬೆಳ್ಳಾರೆ ಗ್ರಾಮದ ಬೆಳ್ಳಾರೆಯ ಮಾಸ್ತಿಕಟ್ಟೆಯಲ್ಲಿರುವ ಅಕ್ಷಯ ಫ್ರೆಶ್ ಚಿಕನ್ ಫಾರ್ಮ್ ನಲ್ಲಿ ಕ್ಲೀನಿಂಗ್ ಕೆಲಸ ಮಾಡುತ್ತಿದ್ದು, ಅದರ ಮಾಲೀಕ ಪ್ರವೀಣ್ ನೆಟ್ಟಾರು ರವರು ದಿನಾಂಕ 26.07.2022 ರಂದು ರಾತ್ರಿ ವ್ಯಾಪಾರ ಮುಗಿಸಿ 20-30 ಗಂಟೆಗೆ ಅಂಗಡಿ ಬಾಗಿಲು ಹಾಕಿ ತನ್ನ ಮನೆ ಕಡೆಗೆ ಹೋಗಲು ಸ್ಕೂಟರಿನಲ್ಲಿ ಕುಳಿತು ಸಿದ್ಧತೆಯಲ್ಲಿದ್ದಾಗ ಅಲ್ಲಿದ್ದ ಫಿರ್ಯಾದಿದಾರರು ಅಂಗಡಿಯ ಒಳಗೆ ರೈನ್ ಕೋಟ್ ತರಲೆಂದು ಹೋದ ಸಮಯ ಅಂಗಡಿಯ ಹೊರಗೆ ಜೋರಾಗಿ ಬೊಬ್ಬೆ ಕೇಳಿ ಹೊರಗಡೆ ಬಂದು ನೋಡುವಷ್ಟರಲ್ಲಿ ಪ್ರವೀಣ್ ನೆಟ್ಟಾರು ರವರು ಸ್ಕೂಟರ್ ನಿಂತಿದ್ದ ಸ್ಥಳದಿಂದ ಸುಮಾರು 50 ಅಡಿ ದೂರದಲ್ಲಿ ಕವಚಿ ಬಿದ್ದಿದ್ದು,ಆಗ ಅಲ್ಲಿಂದ ಮೂರು ಜನ ಅಪರಿಚಿತ ವ್ಯಕ್ತಿಗಳು ಕೈಯಲ್ಲಿ ಹತ್ಯಾರುಗಳನ್ನು ಹಿಡಿದುಕೊಂಡು ಮೋಟಾರು ಸೈಕಲಿನಲ್ಲಿ ಪುತ್ತೂರು ಕಡೆಗೆ ಪರಾರಿಯಾಗಿದ್ದು, ನೆಲದಲ್ಲಿ ಬಿದ್ದಿದ್ದ ಪ್ರವೀಣ್ ರವರನ್ನು | ಬಿ.ಜೆ.ಪಿ | 01 | ಮಾನ್ಯ ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ರೂಪಾಯಿ 25 ಲಕ್ಷ ಹಣವನ್ನು ಮೃತ ಪ್ರವೀಣ್ ನೆಟ್ಟಾರ್ ರವರ ತಾಯಿ ಮತ್ತು ಹೆಂಡತಿಗೆ ದಿನಾಂಕ 28.07.2022 ರಂದು ನೀಡಲಾಗಿರುತ್ತದೆ. | - | ಒಟ್ಟು 10 ಆರೋಪಿಗಳನ್ನು ಬಂಧಿಸಲಾಗಿದೆ | ದಿನಾಂಕ 19.08.2022 ರಂದು ಎನ್ಐಎ ಹಸ್ತಾಂತರಿಸಲಾಗಿದೆ. | ಕೋರ್ಟ… ದ್ದೋಷ… |

| | | | | | | | | | | |
|---|---|---|---|---|---|---|---|---|---|---|
| | | | ಸಾರ್ವಜನಿಕ ರಸ್ತೆ ಮೇಲೆ ಹೋರಟಾಗ ಅಲ್ಲಿ ಆರೋಪಿತರಾದ 1] ಪ್ರವೀಣ ಮುಲ್ಲಿಂಗನವರ, 2] ಯಲ್ಲಪ್ಪಾ ಮೇಟಿ 3] ರುದ್ರಪ್ಪಾ ಮೇಟಿ 4] ಮಲ್ಲಿಕಾರ್ಜುನ ಮೇಟಿ 5] ಶಿವು ಮೇಟಿ 6] ನಾಗರಾಜ ಹೆಗ್ಗಣ್ಣವರ ಹಾಗೂ ಇನ್ನು ಕೆಲವು ಜನರು ಇವರೆಲ್ಲರೂ ಕೂಡಿಕೊಂಡು ಹೊಂಚು ಹಾಕಿಕೊಂಡು ತಲವಾರ ಹಾಗೂ ಚಾಕುವಿನಿಂದ ಹೊಡೆದು. ದೀಪಕ ಪಟದಾರಿ ಈತನನ್ನು ಕೊಲೆ ಮಾಡಿದ್ದು ಇರುತ್ತದೆ. | | | | | | | |

ಶಿವಮೊಗ್ಗ ಜಿಲ್ಲೆ

| ಕ್ರ.ಸ | ನಗರ/ ಜಿಲ್ಲೆ | ಪೊಲೀಸ್ ಠಾಣೆಯ ಹೆಸರು | ಪ್ರಕರಣದ ಸಂಖ್ಯೆ ಹಾಗೂ ಕಲಂ | ಪ್ರಕರಣದ ಸಂಕ್ಷಿಪ್ತ ವಿವರ | ರಾಜಕೀಯ ಪಕ್ಷ/ ಸಂಘ ಸಂಸ್ಥೆಗಳ ಕಾರ್ಯಕರ್ತರ ಹತ್ಯೆಗೀಡಾದವರ ವಿವರ | | | ಪರಿಹಾರ ನೀಡಲುಇರುವ ಸರ್ಕಾರದ ಮಾನದಂಡಗಳು | ಆರೋಪಿಗಳನ್ನು ಬಂಧಿಸಲಾಗಿದೆಯೇ | ತನಿಖೆಯ ಹಂತ | ಮೂ ... ಕ ... ನಿಖ |
|---|---|---|---|---|---|---|---|---|---|---|---|
| | | | | | ಪಕ್ಷ/ ಸಂಘದ ಹೆಸರು | ಹತ್ಯೆಯಾದವರ ಸಂಖ್ಯೆ | ಕುಟುಂಬಕ್ಕೆ ನೀಡಲಾದ ಸರ್ಕಾರದ ಪರಿಹಾರ | | | | |
| 01 | ಶಿವಮೊಗ್ಗ | ದೊಡ್ಡಪೇಟೆ | 77/2022 ಕಲಂ 143, 147, 148, 120 (ಬಿ) 302 ಸಹಿತ 149 ಐಪಿಸಿ& 25 (1) (ಬಿ) ಆರ್ಮ್ಸ್ ಆಕ್ಟ್ 16, 18, 20, ಯುಎಪಿಎ 1967 ಆಕ್ಟ್ | ಪಿರ್ಯಾದಿಯ ಮಗ ಹರ್ಷ ಈತನು ಕಳೆದ 05ವರ್ಷಗಳಿಂದ ಭಜರಂಗ ದಳದ ಕಾರ್ಯಕರ್ತನಾಗಿ ಕೆಲಸ ಮಾಡಿಕೊಂಡಿದ್ದು ಕೆಲ ಮುಸ್ಲಿಂ ಹುಡುಗರು ಪಿರ್ಯಾದಿಯ ಮಗನನ್ನು ಕೊಲೆ ಮಾಡುತ್ತೇವೆ ಎಂದು ಹೇಳುತ್ತಾರೆಂದು ಹೇಳುತ್ತಿದ್ದು ಪಿರ್ಯಾದಿಯ ಮಗ ಯಾರ ತಂಟೆಗೂ ಹೋಗದೇ ಕೆಲಸ ಮಾಡಿಕೊಂಡು ಜೀವನ ನಡೆಸುತ್ತಿದ್ದು ದಿ:20-02-22 ರಂದು ಪಿರ್ಯಾದಿಯ ಮಗ ಊಟ ಮಾಡಲು ಎನ್ ಟಿ ರಸ್ತೆಯಲ್ಲಿ ಹೋಗುತ್ತಿರುವಾಗ ಯಾರೋ ದುಷ್ಕರ್ಮಿಗಳು ಪಿರ್ಯಾದಿಯ ಮಗನನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿದ್ದು ಇವನ ಮೇಲೆ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲು ನೀಡಿದ ದೂರು | ಹಿಂದು ಪರ ಸಂಘಟನೆ | 01 ಹರ್ಷ @ ಹಿಂದು ಹರ್ಷ ಬಿನ ನಾಗರಾಜ, 26/18 ವರ್ಷ, ಬಟ್ಟೆಅಂಗಡಿಯಲ್ಲಿ ಕೆಲಸ, ವಾಸ ಸೀಗೆಹಟ್ಟಿ ಶಿವಮೊಗ್ಗ ನಗರ. | ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ 25 ಲಕ್ಷ ರೂ ಪರಿಹಾರ ನೀಡಿದೆ. | - | ಹೌದು | RC-10/2022/ NIA/Delhi Date 23-03-2022 ರೀತ್ಯಾ ಎನ್.ಐ.ಎ. ಗೆ ವರ್ಗಾವಣೆಯಾಗಿದೆ ದಿನಾಂಕ 03-04-2022 ರಂದು ಕಡತವನ್ನು ಹಸ್ತಾಂತರಿಸಿರುತ್ತದೆ | |

| | | | | | | | | | | | |
|---|---|---|---|---|---|---|---|---|---|---|---|
| | | | | ನೋಡಿದಾಗ ಅವರ ಕುತ್ತಿಗೆಯ ಮತ್ತು ತಲೆಯ ಭಾಗದಲ್ಲಿ ಭಾರಿ ಗಾಯವಾಗಿ ರಕ್ತ ಸ್ರಾವ ಆಗುತ್ತಿದ್ದು, ಸ್ಥಳಕ್ಕೆ ಅಂಬ್ಯುಲೆನ್ಸ್ ಬರ ಹೇಳಿ ಗಾಯಾಳುವನ್ನು ಪುತ್ತೂರು ಪ್ರಗತಿ ಆಸ್ಪತ್ರೆಗೆ ದಾಖಲಿಸಿದಲ್ಲಿ ಅಲ್ಲಿನ ವೈದ್ಯರು ಪರೀಕ್ಷಿಸಿ ಪ್ರವೀಣ ರವರು ಮೃತಪಟ್ಟಿರುವುದಾಗಿ ತಿಳಿಸಿರುತ್ತಾರೆ. ಈ ಕೊಲೆ ಕೃತ್ಯವನ್ನು ಎಸಗಿದ ಅಪರಿಚಿತ ದುಷ್ಕರ್ಮಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕಾಗಿ ಕೋರಿಕೆ | | | | | | | |

## 2023ನೇ ಸಾಲಿನಲ್ಲಿ ವಿವಿಧ ರಾಜಕೀಯ ಪಕ್ಷಗಳ ಹಾಗೂ ಸಂಘ ಸಂಸ್ಥೆಗಳ ಕಾರ್ಯಕರ್ತರ ಹತ್ಯೆಯಾದವರ ಸಂಪೂರ್ಣ ವಿವರ

ಬೆಂಗಳೂರು ಜಿಲ್ಲೆ

| ಕ್ರ.ಸ | ನಗರ /ಜಿಲ್ಲೆ | ಪೊಲೀಸ್ ಠಾಣೆಯ ಹೆಸರು | ಪ್ರಕರಣದ ಸಂಖ್ಯೆ ಹಾಗೂ ಕಲಂ | ಪ್ರಕರಣದ ಸಂಕ್ಷಿಪ್ತ ವಿವರ | ರಾಜಕೀಯ ಪಕ್ಷ/ಸಂಘ ಸಂಸ್ಥೆಗಳ ಕಾರ್ಯಕರ್ತರ ಹತ್ಯೆಗೀಡಾದವರ ವಿವರ | | | ಪರಿಹರ ನೀಡಲು ಇರುವ ಸರ್ಕಾರದ ಮಾನದಂಡಗಳು | ಆರೋಪಿಗಳನ್ನು ಬಂಧಿಸಲಾಗಿದೆಯೇ | ತನಿಖೆಯ ಹಂತ | ತನಿಖೆ ಪೂರ್ಣ ನಿಬರ ಕಾರಣ |
|---|---|---|---|---|---|---|---|---|---|---|---|
| | | | | | ಪಕ್ಷ/ಸಂಘದ ಹೆಸರು | ಹತ್ಯೆಯಾದವರ ಸಂಖ್ಯೆ | ಕುಟುಂಬಕ್ಕೆ ನೀಡಲಾದ ಸರ್ಕಾರದ ಪರಿಹಾರ | | | | |
| 1. | ಬೆಂಗಳೂರು ಜಿಲ್ಲೆ | ನಂದಗುಡಿ | ಮೊನಂ 72/2023 ಕಲಂ 323. 324. 302. 504. 506 ಜೊತೆಗೆ 34 ಐ.ಪಿ.ಸಿ | ಪಿರ್ಯಾದಿಯದಾರರು ಠಾಣೆಗೆ ಹಾಜರಾಗಿ ನೀಡಿದದೂರಿನ ಸಾರಾಂಶವೇನೆಂದರೆ ದಿ:- 13/05/2023 ರಂದು ಮಧ್ಯಾಹ್ನ 01:30 ಗಂಟೆಗೆ ನಮ್ಮ ಯಜಮಾನರಾದ ಬಾಬುರವರು ನಮ್ಮ ಮನೆಯ ಪಕ್ಕದವರಾದ ಮುನಿರಾ ಮತ್ತು ಅವರ ಮಗ ತುರೂಣ್‌ಗೆ ನೀವು ಏಕೆ ಕಾಂಗ್ರೇಸ್ ಕಡೆಗೆ ಹೋಗಿದ್ದಾರಾ ಎಂದು ಕೇಳುತ್ತಿದ್ದಾಗ ಅಲ್ಲೇ ಇದ್ದ ಗಣೇಶ & ಆದಿತ್ಯಾರವರು ನಮ್ಮಯಜಮಾನರ ಕತ್ತಿನಪಟ್ಟಿ ಹಿಡಿದು ಕೈಗಳಿಂದ ಹೊಡೆದು ನೋವುಂಟಾಗಿ ರುತ್ತೆ ಇದೇ ವಿಚಾರವಾಗಿ ನಮ್ಮ ಮಾವ ಕೃಷ್ಣಪ್ಪರವರು ಗಣೇಶಪ್ಪರವರ ಮನೆಯ ಹತ್ತಿರ ಹೋಗಿ | ಬಿಜೆಪಿ | 01 | – | – | ಬಂಧಿಸಲಾಗಿದೆ | – | ಸಿಸಿ ನ 4855/ ಭನ ನ್ಯಾಯ ವಿಚಾರ ಹಂತದ |

| | | | | | | | | | | | |
|---|---|---|---|---|---|---|---|---|---|---|---|
| | | | | ಆದಿತ್ಯಾರವರು ಕೇಳಿದಾಗ ಆದಿತ್ಯ ಆತನ್ನ ಮನೆಯಲ್ಲಿ ಕೊಡಲನ್ನು ತಂದು ಸಡನ್ನಾಗಿ ಕೃಷ್ಣಪ್ಪ ಬೆನ್ನಿಗೆ ಹೊಡಿದ್ದಿದ್ದು ನನ್ನ ಗಂಡ ಬಾಬುರವರಿಗೆ ಕತ್ತಿಗೆ ಹೊಡೆದು ರಕ್ತಗಾಯ ಪಡಿಸಿ ಗಣೇಶಪ್ಪ ಮತ್ತು ಆದಿತ್ಯಾರವರು ಸ್ಥಳದಿಂದ ಓಡಿ ಹೋದರು ನಂತರ ನಾವುಗಳು ಗಾಯಾಳುಗೆ ಚಿಕಿತ್ಸೆಗಾಗಿ ಆಸ್ಪತ್ರೆಗೆಕರೆದು ಕೊಂಡು ಹೋಗಿ ದಾಖಲಿಸಲಾಗಿ ವೈದ್ಯರು ಪರೀಕ್ಷಿಸಿ ಕೃಷ್ಣಪ್ಪ ರವರು ಮೃತಪಟ್ಟ ರುತ್ತಾರೆಂತಾ ಇತ್ಯಾದಿಯಾಗಿ | | | | | | | |

ಕಲಬುರಗಿ ಜಿಲ್ಲೆ

| ಕ್ರ. ಸ | ನಗರ/ ಜಿಲ್ಲೆ | ಪೊಲೀಸ್ ಠಾಣೆಯ ಹೆಸರು | ಪ್ರಕರಣದ ಸಂಖ್ಯೆ ಹಾಗೂ ಕಲಂ | ಪ್ರಕರಣ ಸಂಕ್ಷಿಪ್ತ ವಿವರ | ರಾಜಕೀಯ ಪಕ್ಷಗಳ/ಸಂಘ ಸಂಸ್ಥೆಗಳ ಕಾರ್ಯಕರ್ತರ ಹತ್ಯೆಗೀಡಾದವರ ವಿವರ | | | ಪರಿಹಾರ ನೀಡಲು ಇರುವ ಸರ್ಕಾರದ ಮಾನದಂಡಗಳು | ಆರೋಪಿಗಳನ್ನು ಬಂಧಿಸಲಾಗಿ ದೆಯೇ | ತನಿಖೆ ಹಂತ |
|---|---|---|---|---|---|---|---|---|---|---|
| | | | | | ಪಕ್ಷ ಸಂಘದ ಹೆಸರು | ಹತ್ಯೆಯಾದವರ ಸಂಖ್ಯೆ | ಕುಟುಂಬಕ್ಕೆ ನೀಡಲಾದ ಸರ್ಕಾರ ಪರಿಹಾರ | | | |
| 01 | ಕಲಬುರಗಿ | ದೇವಲ ಗಾಣಗಾಪೂರ ಪೊಲೀಸ ಠಾಣೆ | 138/2023 ಕಲಂ: 143, 147, 148, 120 (ಬಿ) 302 ಸಂ 149 ಐ.ಪಿ.ಸಿ | ಅಫಜಲಪೂರ ತಾಲ್ಲೂಕಿನ ಮದರಾ(ಬಿ) ಗ್ರಾಮದ ದತ್ತು ತಂದೆ ಶಿವಯೋಗಪ್ಪ ಬಿರಾದಾರ ಕಾಂಗ್ರೇಸ್ ಪಕ್ಷದ ಕಾರ್ಯಕರ್ತ ಮತ್ತು ಗುರುಭೀಮ ತಂದೆ ಬಸಣ್ಣ ಯಂಕಂಚಿ ಬಿ.ಜೆ.ಪಿ. ಪಕ್ಷದ ಇರ್ವರ ಮಧ್ಯ ಸುಮಾರು 25-30 ವರ್ಷಗಳಿಂದ ವೈಯುಕ್ತಿಕವಾಗಿ ಮತ್ತು ರಾಜಕೀಯ ವಿಷಯವಾಗಿ ವೈಷಮ್ಯ ಇದ್ದು ಕಳೆದ ವರ್ಷ ಮೇ ತಿಂಗಳಲ್ಲಿ ಜಗಳವಾಗಿ ರೇವೂರ ಠಾಣೆಯಲ್ಲಿ ಕೇಸು ದಾಖಲಾಗಿರುತ್ತವೆ. ಹೀಗಿದ್ದು ದಿನಾಂಕ: 13/10/2023 ರಂದು ಮದರಾ (ಬಿ) ಗ್ರಾಮದ ಶಿವಲಿಂಗಪ್ಪ ಪಡಶೇಟ್ಟಿರವರ ತಾಯಿ | ಕಾಂಗ್ರೇಸ ಪಕ್ಷ | 01 | - | - | 12 ಜನ ಆರೋಪಿಗಳನ್ನು ಬಂಧಿಸಲಾಗಿದೆ | ಮಾನ್ಯ ಮಹಾ ನಿರ್ದೇಶಕರು ಮತ್ತು ಪೊಲೀಸ್ ಮಹಾ ನಿರೀಕ್ಷಕರು ಬೆಂಗಳೂರು ರವರ ಆದೇಶ ಸಂಖ್ಯೆ: ಜ್ಞಾಪನ ಪತ್ರ ಸಂಖ್ಯೆ ಎಲ್&ಒ/ಎಸ್/671/ 2023-24 ದಿನಾಂಕ 20/10/2023 ನೇದ್ದರ ಪ್ರಕಾರ ಸಿ.ಐ.ಡಿ ಗೆ ವರ್ಗಾವಣೆಯಾಗಿದ್ದು ಸದರಿ ಪ್ರಕರಣವು ಇನ್ನೂ ತನಿಖೆಯಲ್ಲಿರುತ್ತದೆ. |

| | | | | | | | | | | |
|---|---|---|---|---|---|---|---|---|---|---|
| | | | | ತಿಂಕೊಂಡಿರುತ್ತಾರೆ ಶವ ಸಂಸ್ಕಾರ ಕುರಿತು ಉಚಾಯಿ ವಲ್ಡಿಂಗ ಮಾಡಿಸಿಕೊಂಡು ಬರಲು ಫಿರ್ಯಾದಿ ಮತ್ತು ಗೌಡಪ್ಪಗೌಡ ಹಾಗೂ ಇತರರು ಉಚಾಯಿ ಮಾಡಿಸಲು ಹೋದಾಗ ಮದರಾ (ಬಿ) ಗ್ರಾಮದ 1) ಗುರುಭೀಮ 2) ಶರಣಪ್ಪ 3) ಮಲ್ಲಿಕಾರ್ಜುನ 4) ಸಿಂಗಣ್ಣ 5) ಪಪ್ಪುಲ 6) ದತ್ತು 7) ಪುಂಡಲಿಂಗ 8) ಬಾಬು 9) ನಾಗರಾಜ 10) ಮಹಾಂತಪ್ಪರವರೆಲ್ಲರೂ ಕೂಡಿಕೊಂಡು ಬಂದು ತಲ್ವಾರಗಳಿಂದ ಚಾಕುವಿನಿಂದ ರಾಡಗಳಿಂದ ಎಲ್ಲರೂ ಕೂಡಿ ಗೌಡಪ್ಪಗೌಡ ಇತನ ತಲೆಗೆ ಮುಖಕ್ಕೆ ಹೊಡೆದು ಕಲ್ಲು ತಲೆಯ ಮೇಲೆ ಎತ್ತಿ ಹಾಕಿ ಕೊಲೆ ಮಾಡಿರುತ್ತಾರೆ ಸದರಿ ಕೊಲೆಯ ಹಿಂದೆ ಹಲವಾರು ಕಾಣದ ಕೈಗಳು ಇರುತ್ತವೆ ಅಂತಾ ಫಿರ್ಯಾದಿ ಸಲ್ಲಿಸಿದ್ದು ಇರುತ್ತದೆ. | | | | | | |

ಮೈಸೂರು ಜಿಲ್ಲೆ

| ಕ್ರಸ | ಜಿಲ್ಲೆ | ಪೊಲೀಸ್ ಠಾಣೆ ಹೆಸರು | ಪ್ರಕರಣದ ಸಂಖ್ಯೆ ಹಾಗೂ ಕಲಂ | ಪ್ರಕರಣದ ಸಂಕ್ಷಿಪ್ತ ವಿವರ | ರಾಜಕೀಯ ಪಕ್ಷ/ಸಂಘ ಸಂಸ್ಥೆಗಳ ಕಾರ್ಯಕರ್ತರ ಹತ್ಯೆಗೀಡಾದವರ ವಿವರ | | | ಪರಿಹಾರ ನೀಡಲು ಇರುವ ಸರ್ಕಾರದ ಮಾನ ದಂಡಗಳು | ಆರೋಪಿಗಳನ್ನು ಬಂಧಿಸಲಾಗಿದೆಯೇ | ತನಿಖೆಯ ಹಂತ | : ಪೂ ದರೆ ನಿ ಕ |
|---|---|---|---|---|---|---|---|---|---|---|---|
| | | | | | ಪಕ್ಷ/ ಸಂಘದ ಹೆಸರು | ಹತ್ಯೆಯಾದವರ ಸಂಖ್ಯೆ | ಕುಟುಂಬಕ್ಕೆ ನೀಡಲಾದ ಸರ್ಕಾರದ ಪರಿಹಾರ | | | | |
| 1 | ಮೈಸೂರು ಜಿಲ್ಲೆ | ಟಿ. ನರಸೀಪುರ ಪೊಲೀಸ್ ಠಾಣೆ | ಮೊ.ನಂ. 173/2023 ಕಲಂ:- IPC 1860 U/s: 504,143, 147,148, 149,302, 307 The SC & ST (Prevention of Atrocities) Amendment Act 2015 U/s: 3 (2)(v) IPC 1860 U/s: 341, 506, 323, 201, 120 | ದಿನಾಂಕ 09.07.2023 ರಂದು 23.00 ಗಂಟೆಗೆ ಠಾಣೆಗೆ ಹಾಜರಾಗಿ ನೀಡಿದ ದೂರಿನ ಸಾರಾಂಶವೇನೆಂದರೆ -ನಾನು ಮೇಲ್ಕಂಡ ವಿಳಾಸದಲ್ಲಿ ವಾಸವಾಗಿರುತ್ತೇನೆ. ನಂಜನಗೂಡಿನ ಕೂಟ್ಟಕಲ್ ಖಾಸಗಿ ಕಾರ್ಖಾನೆಯಲ್ಲಿ ಕೆಲಸ ಮಾಡಿಕೊಂಡು ಜೀವನ ಮಾಡಿಕೊಂಡಿರುತ್ತೇನೆ. ದಿನಾಂಕ 08.07.2023 ರಂದು ವೀರಾಂಜನೇಯ ಧರ್ಮ ಜಾಗೃತಿ ಬಳಗದಿಂದ ತಿ.ನರಸೀಪುರದಲ್ಲಿ ಹನುಮ ಜಯಂತಿ ಕಾರ್ಯಕ್ರಮ ಹಮ್ಮಿಕೊಂಡಿದ್ದು ನಾನು ಸಹ ಸಮಿತಿಯ ಸದ್ಯಸನಾಗಿರುತ್ತೇನೆ. 08.07.2023 ರಂದು ಮಧ್ಯಾಹ್ನ 1.00 ಗಂಟೆ ಸಮಯದಲ್ಲಿ ಉತ್ಸವ ಹೊರಡುವ ಗುಂಜ ನರಸಿಂಹಸ್ವಾಮಿ ದೇವಾಲಯದ ಮುಖ್ಯದ್ವಾರದ ದೇವಾಲಯದ ಬಳಿ ಉತ್ಸವ ಮೂರ್ತಿಗಳನ್ನು ಮೆರವಣಿಗೆಗೆ ಸಿದ್ಧವಾಗುತ್ತಿದ್ದು ಹಾಗೂ ಸಾರ್ವಜನಿಕರು ಮತ್ತು ಹನುಮ ಭಕ್ತರಿದ್ದುದ್ದರಿಂದ ಯಾವುದೇ ವಾಹನಗಳನ್ನು ದೇವಾಲಯದ | ವೀರಾಂಜನೇಯ ಧರ್ಮ ಜಾಗೃತಿ ಬಳಗ ತಿ.ನರಸೀಪುರ. ಮೈಸೂರು ಜಿಲ್ಲೆ. | ಒಬ್ಬರು | 2 ಲಕ್ಷ 50 ಸಾವಿರ ರೂಗಳು | – | ಪ್ರಕರಣದ ಎಲ್ಲಾ ಆರೋಪಿಗಳನ್ನು ಬಂಧಿಸಲಾಗಿರುತ್ತೆ. | ಪ್ರಕರಣದಲ್ಲಿ ತನಿಖೆ ಪೂರೈಸಿ ಘನ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರವನ್ನು ಸಲ್ಲಿಸಿದ್ದು, ಸ್ಪೆಷಲ್ ಸಿ.ಸಿ. 647/2023 ರಲ್ಲಿ ಮೈಸೂರಿನ ಘನ 6 ನೇ ಅಧಿಕ ಸತ್ರ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುತ್ತೆ. | ಹನುಮ ಕಾರ್ಯ ಗುಂಜ ನರಸಿಂ ದೇವಸ್ ಒಳಗೆ ಬೈಕ್‌ಗಳ ನಿಲ್ಲಿಸಲ ತಡೆದಿದ್ ಹಾಗೂ ಮೊಟೊ ವಾಹನ ತೆರವುಗೆ ವಿಚಾರ |

| | | | | | | | | | | |
|---|---|---|---|---|---|---|---|---|---|---|
| | | | | ಆವರಣಕ್ಕೆ ಬಿಡದಂತೆ ವಾಹನಗಳನ್ನು ತಡೆದು ಹೊರಗೆ ನಿಲ್ಲಿಸುವಂತೆ ಸೂಚಿಸುತ್ತಿದ್ದೆವು. ಮದ್ಯಾಹ್ನ 1.30 ಗಂಟೆ ಸಮಯದಲ್ಲಿ ಶ್ರೀರಾಂಪುರದ ಮಣಿಕಂಠ, ತಿರುಮಕೂಡಲಿನ ಸಂದೇಶ್ ಬೈಕ್ ನಲ್ಲಿ ದೇವಾಲಯದ ಮುಖ್ಯದ್ವಾರದಿಂದ ಒಳಗೆ ಬರುತ್ತಿದ್ದರು. ನಾನು ಗೋಪಾಲ ಹಾಗೂ ಕಾರ್ಯಕರ್ತರು ಉತ್ಸವ ಮೂರ್ತಿ ಹೊರಗೆ ಹೋಗುವವರೆಗೂ ಯಾವುದೇ ವಾಹನಗಳು ಒಳಗೆ ಹೋಗುವುದು ಬೇಡ ಬೈಕ್ ಗಳನ್ನು ದೇವಾಲಯದ ಹೊರಗೆ ನಿಲ್ಲಿಸಿ ಎಂದು ಹೇಳಿದೆವು. ಅ ಸಮಯದಲ್ಲಿ ಇದೇ ಕಾರಣಕ್ಕೆ ಕೋಪಗೊಂಡ ಮಣಿಕಂಠ ಮತ್ತು ಸಂದೇಶ ರವರು ನಮ್ಮ ಬೈಕ್ ಗಳನ್ನು ಒಳಗೆ ಬಿಡುವುದಿಲ್ಲಾ ನೀನು ಹೇಗೆ ಹನುಮ ಉತ್ಸವ ಮಾಡುತ್ತಿರಾ ನಮಗೂ ಉತ್ಸವವನ್ನು ಹೇಗೆ ನಿಲ್ಲಿಸಬೇಕು ಅಂತ ಗೊತ್ತು ಅಂತಾ ಅವಾಚ್ಯ ಶಬ್ದಗಳಿಂದ ನಿಂದಿಸಿದರು. ನಾನು ಹಾಗೂ ವೇಣುಗೋಪಾಲ ಇದು ದೇವರ ಕೆಲಸ ನಮ್ಮಲ್ಲೇ ಗಲಾಟೆ ಬೇಡವೆಂದು ಹೇಳಿದೆವು. ಅಷ್ಟರಲ್ಲಿ ಜನರು ಸೇರುತ್ತಿದ್ದಂತೆ ನೀನು ತಪ್ಪಿಸಿಕೊಂಡಿದ್ದಿಯಾ ಹನುಮ ಉತ್ಸವ ಮುಗಿಯಲಿ ನಾಳೆ ನಿನ್ನನ್ನು ಮುಗಿಸುತ್ತೇವೆ ಎಂದು ಸಂದೇಶ ಮತ್ತು ಮಣಿಕಂಠ ಉತ್ಸವದಲ್ಲಿ ಸೇರಿಕೊಂಡರು. ಉತ್ಸವ ರಾತ್ರಿ 9.30 ಗಂಟೆಗೆ ಪುರ ಪ್ರದಕ್ಷಿಣೆಯಾಗಿ ಗುಂಜನರಸಿಂಹಸ್ವಾಮಿ ದೇವಾಲಯದ ಬಳಿ ಮುಕ್ತಾಯವಾಯಿತ್ತು. ದಿನಾಂಕ 09.7.2023 ರಂದು ಮದ್ಯಾಹ್ನ 4.00 | | | | | | |

| | | | | | | | | | | | |
|---|---|---|---|---|---|---|---|---|---|---|---|
| | | | | ಗಂಟೆಗೆ ನಾನು ವೇಣುಗೋಪಾಲ ಶಾಮಿಯಾನ ಅಂಗಡಿ ಬಳಿ ಉತ್ಸವಕ್ಕೆ ಬಾಡಿಗೆಗೆ ತಂದಿದ್ದ ವಸ್ತುಗಳನ್ನು ಹಿಂತಿರುಗಿಸುತ್ತಿದ್ದೆವು. ಆಗ ಅಲ್ಲಿಗೆ ಬಂದ ನಾಯಕ ಜನಾಂಗ ಮಣಿಕಂಠ @ (ಕೂಳೆ ಮಣಿ), ಅನಿಲ, ಕುರುಬ ಜನಾಂಗದ ಶಂಕರ @ ತುಪ್ಪ, ಒಕ್ಕಲಿಗ ಜನಾಂಗದ ಸಂದೇಶ್ ರವರುಗಳು ಬಂದು ನಿನ್ನೆಯ ವಿಚಾರಗಳನ್ನು ತೆಗೆದು ನೆನ್ನೆ ಹನುಮ ಜಯಂತಿಯಲ್ಲಿ ನಮ್ಮ ಬೈಕ್ ಗಳನ್ನು ಒಳಗೆ ಬಿಡದೇ ತಡೆದು ಅವಮಾನ ಮಾಡಿದ್ಧಿರಿ ಮತ್ತು ಅಪ್ಪು ಫೋಟೊವನ್ನು ಹನುಮಂತನ ವಾಹನಕ್ಕೆ ಕಟ್ಟಬೇಡಿ ಅಂದಿರಿ ಬೋಳಿಮಕ್ಕಳೆ ಎಂದು ಅವಾಚ್ಯ ಶಬ್ದದಿಂದ ನಿಂದಿಸಿ ಗಲಾಟೆ ತೆಗೆದು ವೇಣುಗೋಪಾಲನಿಗೆ ಬಟ್ಟೆ ಹರಿದು ತುಟಿಗೆ ರಕ್ತ ಬರುವಂತೆ ಶಂಕರ್. ಅನಿಲ್. ಸಂದೇಶ್. ಮಣಿಕಂಠ ಇವರುಗಳು ವೇಣುಗೋಪಾಲನಿಗೆ ಹೊಡೆದರು. ತಕ್ಷಣ ನಾನು ಹಾಗೂ ಚೇತನ್ ಶಾಮಿಯಾನ ಅಂಗಡಿಯ ಮುಂದೆ ಜಗಳವನ್ನು ಬಿಡಿಸುತ್ತಿದ್ದೆವು. ಅಷ್ಟರಲ್ಲಿ ಪೊಲೀಸ್ ವಾಹನ ಅದೇ ರಸ್ತೆಯಲ್ಲಿ ಬರುತ್ತಿದ್ದಂತೆ ಎಲ್ಲರೂ ಹೊರಟು ಹೋದರು. ನಂತರ ರಾತ್ರಿ 8.15 ಗಂಟೆ ಸಮಯದಲ್ಲಿ ನಾನು ವೇಣುಗೋಪಾಲ, ಚೇತನ್, ಸಂಜಯ್ ನಮ್ಮ ಮನೆಯ ಬಳಿ ಇರುವಾಗ ಮಣಿಕಂಠ ಎಂಬುವವನು ವೇಣುಗೋಪಾಲನಿಗೆ ಕರೆ ಮಾಡಿ ನಿನ್ನೊಂದಿಗೆ ಮಾತಾನಾಡಬೇಕು ಸರ್ವಿಸ್ ಸ್ಟೇಷನ್ ಬಳಿ ಬಾ ಎಂದು ಕರೆದು ನಾನು | | | | | | | |

| | | | | | | | | | | | |
|---|---|---|---|---|---|---|---|---|---|---|---|
| | | | | ಸರ್ವಿಸ್ ಸ್ಟೇಷನ್ ಬಳಿ ಬರುವುದಿಲ್ಲ ಎಂದಾಗ ನೀನು ಇವಾಗ ಸರ್ವಿಸ್ ಸ್ಟೇಷನ್ ಬಳಿ ಬರದಿದ್ದರೇ ನಾವೆಲ್ಲರೂ ನಿಮ್ಮ ಮನೆಯ ಬಳಿ ಬಂದು ಗಲಾಟೆ ಮಾಡಬೇಕಾಗುತ್ತದೆ ಎಂದು ದಮ್ಕಿ ಹಾಕಿದ. ಸರ್ವಿಸ್ ಸ್ಟೇಷನ್ ಬಳಿ ಇಲ್ಲವಾದರೇ ಪೈರ್ ಆಫೀಸ್ ಮುಂದೆ ಆದರೂ ಬಾ ಎಂದು ಕರೆದ. ಆಗ ವೇಣುಗೋಪಾಲ ಚೇತನ್ ನನ್ನು ಕರೆಸಿಕೊಂಡು ಪೈರ್ ಆಫೀಸ್ ಕಡೆ ಹೋಗಲು ಸಿದ್ದವಾಗುತ್ತಿದ್ದಂತೆ ನೀನು ಅಲ್ಲಿಗೆ ಹೋಗಬೇಡ ಮದ್ಯಾಹ್ನ ನಿನ್ನನ್ನು ಗುರಿ ಮಾಡಿ ಮಣಿಕಂಠ, ಶಂಕರ, ಅನಿಲ್, ಸಂದೇಶ ಗಲಾಟೆ ಮಾಡಿದ್ದಾರೆ ಹಾಗಾಗಿ ನೀನು ಹೋಗುವುದು ಬೇಡ ಎಂದು ತಡೆದೆ. ಆದರೂ ವೇಣುಗೋಪಾಲ ಹೋಗಿ ಮಾತಾನಾಡಿ ಸಮಸ್ಯೆ ಬಗೆ ಹರಿಸಿಕೊಳ್ಳೋಣವೆಂದು ಹೇಳಿ ಹೊರಡುತ್ತಿದ್ದಂತೆ ನಾನು ಸಂಜಯ್ ಕೂಡ ಹಿಂದೆಯೆ ಹೊರಟೆವು. ಅವರ ಹಿಂದೆಯೆ ನಾನು ಮತ್ತು ಸಂಜಯ್ ಮೋಟರ್ ಸೈಕಲ್ ನಲ್ಲಿ ತಿ.ನರಸೀಪುರ ತಲಕಾಡು ರಸ್ತೆಯಲ್ಲಿರುವ ಪೈರ್ ಸರ್ವಿಸ್ ಸ್ಟೇಷನ್ ಎದುರು ಅನಿಲ್ @ ಗಲ್ಲಿ ರವರ ಸರ್ವಿಸ್ ಸ್ಟೇಷನ್ ಮುಂಭಾಗ ಹೋಗುತ್ತಿದ್ದಂತೆ ಮಣಿಕಂಠ, ಅನಿಲ್, ಮಂಜು, ಶಂಕರ, ಹ್ಯಾರಿಸ್, ಸಂದೇಶ್ ಮತ್ತು ಮೂರು ನಾಲ್ಕು ಜನರು ಒಟ್ಟಾಗಿ ಗುಂಪುಕಟ್ಟಿಕೊಂಡು ಕೈ ಗಳಲ್ಲಿ ಮಾರಕಾಸ್ತ್ರಗಳನ್ನು ಕೊಲೆ ಮಾಡುವ ದುರುದ್ದೇಶದಿಂದ ಆಯುಧಗಳನ್ನು | | | | | | | |

| | | | | | | | | | | | |
|---|---|---|---|---|---|---|---|---|---|---|---|
| | | | | ಹಿಡಿದುಕೊಂಡು ಪೂರ್ವಸಜ್ಜಿತರಾಗಿದ್ದರು. ವೇಣುಗೋಪಾಲ ಮತ್ತು ಚೇತನ್ ರವರುಗಳು ಮೋಟರ್ ಸೈಕಲ್ ಕೆಳಗೆ ಇಳಿಯುತ್ತಿದ್ದಂತೆ 08.07.2023 ರಂದು ಮೋಟರ್ ಸೈಕಲ್ ಗಳನ್ನು ಒಳಗೆ ಬಿಡದೇ ಇದ್ದ ವಿಚಾರದಲ್ಲಿ ಆಕ್ಷೇಪಣೆ ವ್ಯಕ್ತ ಪಡಿಸಿ ಜಗಳ ತೆಗೆದು ವೇಣುಗೋಪಾಲನಿಗೆ ಮಣಿಕಂಠ ಮತ್ತು ಹಿಡಿದು ಹೊಡೆಯಲಾರಂಭಿಸುತ್ತಿದ್ದಂತೆ ಹಿಂದಿನಿಂದ ಅನಿಲ್ @ ಗಲ್ಲಿ ಎಂಬುವವನು ಹೊಡೆದ ಗಾಜಿನ ಬಾಟಲಿಯಿಂದ ಮುಖ ಮತ್ತು ತಲೆಗೆ ಹೊಡೆದು ಬಾಟಲಿನಿಂದ ಚುಚ್ಚಿದ. ಶಂಕರ @ ತುಪ್ಪ ಚಾಕುವಿನಿಂದ ಹೊಟ್ಟೆ ಮತ್ತು ಪಕ್ಕೆ ಬಾಗಗಳಿಗೆ ಚುಚ್ಚಿದ. ಹ್ಯಾರಿಸ್ ಎಂಬುವವನು ಹೊಡೆದ ಗಾಜಿನ ಬಾಟಲಿಯಿಂದ ದೇಹದ ಎಲ್ಲ ಭಾಗಗಳಿಗೂ ಚುಚ್ಚುತ್ತಿದ್ದ. ಮತ್ತು ಮಂಜು ಎಂಬುವವನು ಹೊಡೆದ ಗಾಜಿನ ಬಾಟಲಿಯಿಂದ ಪಕ್ಕೆ ಭಾಗಕ್ಕೆ ಮತ್ತು ಕತ್ತಿಗೆ ಚುಚ್ಚಿ ಕೊಲೆ ಮಾಡಲು ಪ್ರಯತ್ನಿಸುತ್ತಿದ್ದರು. ಮೇಲ್ಕಂಡ ನಾವುಗಳು ಬಿಡಿಸಿಕೊಳ್ಳಲು ಹೋಗುತ್ತಿದ್ದಂತೆ ನನಗೆ ಶಂಕರ @ ತುಪ್ಪ ಕೈಗಳಿಂದ ಹಾಗೂ ಹೊಡೆದ ಗಾಜಿನ ಬಾಟಲಿಗಳಿಂದ ಚುಚ್ಚಲು ಬಂದಾಗ ನಾನು ತಪ್ಪಿಸಿಕೊಂಡೆನು. ನಂತರ ನಾವು 3 ಜನರು ಜಗಳ ಬಿಡಿಸಲು ಪ್ರಯತ್ನಿಸಿ ರಕ್ತ ಸ್ರಾವಗೊಂಡು ಬಿದ್ದು ಹೋಗಿದ್ದ ವೇಣುಗೋಪಾಲನನ್ನು ಉಪಚರಿಸುತ್ತಿದ್ದೆವು. ಮೇಲ್ಕಂಡ ಎಲ್ಲರೂ ಆಯುಧಗಳ ಸಮೇತ ತಪ್ಪಿಸಿಕೊಂಡು ಓಡಿ | | | | | | | |

| | | | | | | | | | | | |
|---|---|---|---|---|---|---|---|---|---|---|---|
| | | | | ಹೋದರು. ವೇಣುಗೋಪಾಲನ ಮುಖ ತಲೆ ಹಿಂಭಾಗ, ಹೊಟ್ಟೆ ಪಕ್ಕೆ ಮೈ ಕೈ ಕಾಲುಗಳಿಗೆ ರಕ್ತಗಾಯಗಳಾಗಿ ರಕ್ತ ಸ್ರಾವಗೊಂಡು ಪ್ರಜ್ಞೆ ತಪ್ಪಿ ಬಿದ್ದು ಹೋಗಿದ್ದನು. ನಂತರ ವಿಷಯ ತಿಳಿದು ಸುನಾಗ ಮತ್ತು ಯಶ್ವಂತ್ ಸ್ಥಳಕ್ಕೆ ಬಂದಿದ್ದು ಅವರ ಸಹಾಯದಿಂದ ಗಾಯಗಳು ವೇಣುಗೋಪಾಲನನ್ನು ಕೆ ಎಸ್ ಆರ್ ಟಿ ಸಿ ಬಸ್ ಸ್ಟಾಂಡ್ ವರೆವಿಗೂ ಹಾಕಿಕೊಂಡು ಬಂದು ನಂತರ ಬಾಡಿಗೆ ಆಟೋ ರಿಕ್ಷಾದಲ್ಲಿ ವೇಣುಗೋಪಾಲನನ್ನು ಹಾಕಿಕೊಂಡು ತಿ.ನರಸೀಪುರ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯರು ಪರಿಶೀಲಿಸಿ ಮೃತಪಟ್ಟಿರುತ್ತಾನೆಂದು ತಿಳಿಸಿರುತ್ತಾರೆ. ಮೇಲ್ಕಂಡ ಆರೋಪಿತರುಗಳ ಜೊತೆಯಲ್ಲಿದ್ದ ಉಳಿದ ಆರೋಪಿತರನ್ನು ವಾಹನದ ಬೆಳಕಿನಲ್ಲಿ ಮತ್ತು ಪೈರ್ ಸ್ಟೇಷನ್ ವಿದ್ಯುತ್ ಬೆಳಕಿನಲ್ಲಿ ನೋಡಿದ್ದು ಪುನಃ ನೋಡಿದರೆ ಗುರ್ತಿಸುತ್ತೇನೆ. ಮೇಲ್ಕಂಡ ಆರೋಪಿತರು ವೇಣುಗೋಪಾಲ ಮತ್ತು ನನ್ನನ್ನು ಕೊಲೆ ಮಾಡುವ ದುರುದ್ದೇಶದಿಂದ ದಿನಾಂಕ 09.07.2023 ರಂದು ರಾತ್ರಿ ಸಮಯ 8.30 ಗಂಟೆ ಸಮಯದಲ್ಲಿ ಮಾರಕಾಸ್ತ್ರಗಳಿಂದ ಗುಂಪುಕಟ್ಟಿಕೊಂಡು ಹಲ್ಲೆ ನಡೆಸಿ ವೇಣುಗೋಪಾಲನನ್ನು ಕೊಲೆ ಮಾಡಿ ನನ್ನನ್ನು ಕೊಲೆ ಮಾಡಲು ಪ್ರಯತ್ನಿರುವುದಾಗಿ ದೂರು | | | | | | | |

ರಾಯಚೂರು

| ಕ ಸ | ನಗರ/ಜಿಲ್ಲೆ | ಪೊಲೀಸ್ ಠಾಣೆ ಹೆಸರು | ಪ್ರಕರಣ ಸಂಖ್ಯೆ & ಕಲಂ | ಪ್ರಕರಣದ ಸಂಕ್ಷಿಪ್ತ ವಿವರ | ರಾಜಕೀಯ ಪಕ್ಷ, ಸಂಘ & ಸಂಸ್ಥೆಯ ಹತ್ಯೆಗೀಡಾದವರ ವಿವರ | | | ಪರಿಹಾರ ನೀಡಲಿರುವ ಸರಕಾರದ ಮಾನದಂಡ | ಆರೋಪಿ ಗಳನ್ನು ಬಂಧಿಸಲಾಗಿ ದಿಯೇ | ತನಿಖೆಯ ಹಂತ | ತ ಪ ಗೋ ಕ ನಿ ಕ |
|---|---|---|---|---|---|---|---|---|---|---|---|
| | | | | | ಪಕ್ಷ/ ಸಂಘದ ಹೆಸರು | ಹತ್ಯೆಯಾದ ವರ ಸಂಖ್ಯೆ | ಕುಟುಂಬಕ್ಕೆ ನೀಡಲಾದ ಸರಕಾರದ ಪರಿಹಾರ | | | | |
| 1 | ರಾಯಚೂರು | ಮಾನವಿ ಠಾಣೆ | 289/2023 ಕಲಂ 302, 341, 109 ಸಹಿತ 149 ಐ.ಪಿ.ಸಿ. | ದಿನಾಂಕ 30/10/2023 ರಂದು 1130 ಗಂಟೆ ಸುಮಾರಿಗೆ ಫಿರ್ಯಾದಿಯ ಮಗ ಮೃತ ಪ್ರಸಾದ ತಂದೆ ಮರಿಸ್ವಾಮಿ 43 ವರ್ಷ ಜಾ:ಮಾದಿಗ ಉ:ಸಮಾಜ ಸೇವೆ ಸಾ:ಮದ್ಲಾಪೂರು ತಾ:ಮಾನವಿ ಈತನು ಮೋಟಾರ ಸೈಕಲ್ ಹಿಂದೆ ಸುಮಿತ್ರ @ ರವಿ ಈತನನ್ನು ಕೂಡಿಸಿಕೊಂಡು ಮದ್ಲಾಪೂರದಿಂದ ರಬ್ಬಣಕಲ್ ಸೀಮಾದಲ್ಲಿರುವ ತಮ್ಮ ಹೊಲಕ್ಕೆ ಹೋಗುತ್ತಿದ್ದಾಗ ಮದ್ಲಾಪೂರು ಸೀಮಾದ ಮುದುಕಪ್ಪನ ಹೊಲದ ಹತ್ತಿರ ಕಾಲುವೆ ರಸ್ತೆಯ ಮೇಲೆ ಎದುರಿಗೆ ಎ-1 ಕೇಶವ ತಂದೆ ನರಸಪ್ಪ ನಾಯಕ ಸಾ:ರಬ್ಬಣಕಲ್ 2)ರಾಮ @ ಗುರುಕಪ್ಪ ತಂದೆ ನರಸಪ್ಪ ನಾಯಕ ಸಾ:ರಬ್ಬಣಕಲ್ ಇವರು ತಮ್ಮ ಕೈಯಲ್ಲಿ ಮಾರಕಾಸ್ತ್ರಗಳನ್ನು ಹಿಡಿದುಕೊಂಡು ಬಂದು ಮೋಟಾರ್ ಸೈಕಲ್ ನಿಲ್ಲಿಸಿ ಏಕಾಏಕಿ ಪ್ರಸಾದನಿಗೆ ಮಾರಕಾಸ್ತ್ರಗಳಿಂದ ಹೊಡೆದು ಕೊಲೆ | ಕಾಂಗ್ರೇಸ ಪಕ್ಷದ ಕಾರ್ಯಕರ್ತ | 1 | ದೋ. ಪತ್ರ ಸಲ್ಲಿಸಿದ ನಂತರ ನೊಂದವರ ಪರಿಹಾರ ನಿಧಿ-2011 ರಡಿ ಪರಿಹಾರ ಪಡೆದು ಕೊಳ್ಳುವಂತೆ | – | ಬಂಧಿಸ ಲಾಗಿದೆ | ತನಿಖೆ | ಗ ಪಂ ಚು ಹಿನ್ನೆ |

| | | | | | | | | | | | |
|---|---|---|---|---|---|---|---|---|---|---|---|
| | | | | ಮಾಡಿದ್ದು, ಎ-3 ದೇವ ಈತನು ಪ್ರಸಾದನ ಮೋಟಾರ ಸೈಕಲ್ ತೆಗೆದುಕೊಂಡು ಬಂದು ಎ-1 ಮತ್ತು ಎ-2 ರವರನ್ನು ಕರೆದುಕೊಂಡು ಹೋಗಿದ್ದು, ಎ-4 ರಮೇಶ ಈತನು ಕಾಯುತ್ತಾ ನಿಂತಿದ್ದು, ಘಟನೆಗೆ ಎ-5 ಸಾಲಿ ವೆಂಕಟೇಶನ ಹೆಂಡತಿ ಪಂಚಾಯತ ಅಧ್ಯಕ್ಷ, ಉಪಾಧ್ಯಾಕ್ಷ ಮಾಡುವ ವಿಷಯದಲ್ಲಿ ಈಗ್ಗೆ 5-6 ತಿಂಗಳ ಹಿಂದೆ ಮೃತನೊಂದಿಗೆ ಜಗಳವಾದ ದ್ವೇಷದಿಂದ ಕೊಲೆ ಮಾಡಿದ್ದು ಕೊಲೆಗೆ ಎ-5 ರಿಂದ ಎ-12 ರವರು ಪ್ರಚೋದನೆ ನೀಡಿರುತ್ತಾರೆ. | | | | | | | |